**Witness is present and duly sworn on 02.02.2026.**

**Examination in chief for the defendant : by Sri. MSB counsel for defendant :**

I have filed my chief examination in affidavit. The contents of the affidavit are true and correct and it bears my signature.

I have produced the following documents and the same may be marked as exhibits on my behalf.

| Documents | Exhibits |
|---|---|
| Special Power of Attorney dated 31.01.2026 | **Ex.D.1** |

(Further chief examination deferred).

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

**Witness is present and duly sworn on 06.02.2026.**

**Further examination in chief for the defendant : by Sri. MSB counsel for defendant :**

I have produced the following documents and the same may be marked as exhibits on my behalf.

| Documents | Exhibits |
|---|---|
| Certified copy of sale deed dated 03.01.1996 | **Ex.D.2** |
| Digitally signed copy of the gift deed dated 14.07.2011 (subject to proof) | **Ex.D.3** |

Advocate for the defendant prays to mark the copy of the sale agreement dated 09.08.2021 contending that, that document contains the signature of the parties and he has produced certificate u/Sec.65B of Indian Evidence Act. On perusal of this document it is clear that this document is the xerox copy and therefore, the same cannot be marked. The counsel for the defendant submitted that the original sale agreement is in the possession of the plaintiff. However, without laying the foundations in order to mark the documents the court cannot mark this document. Accordingly, the prayer of defendant is hereby rejected.

**ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಪಿ.ಡಿ.ಪಿ ವಕೀಲರಿಂದ ಃ**

1. ಈ ದಾವೆಯಲ್ಲಿರುವ 1 ನೇ ಪ್ರತಿವಾದಿ ನನ್ನ ತಾಯಿ, 2 ನೇ ಪ್ರತಿವಾದಿ ನನ್ನ ಅಣ್ಣ. ವಾದಿಯ ಜೊತೆ ಮಾಡಿದ ಎಲ್ಲಾ ವ್ಯವಹಾರದ ಮಾಹಿತಿ ನನಗೆ ಇದೆ. ಈ ದಾವೆಯಲ್ಲಿ ಲಿಖಿಸಿತ ತಕರಾರು ಹಾಕುವ ಸಂದರ್ಭದಲ್ಲಿ ಮತ್ತು ಪ್ರಾ.ಸ.1 ರವರ ವಿಚಾರಣೆ ಸಂದರ್ಭದಲ್ಲಿ ನನಗೆ 1 ಹಾಗೂ 2 ನೇ ಪ್ರತಿವಾದಿಗಳು ಪವರ್ ಆಫ್ ಅಟಾರ್ನಿ ಕೆಟ್ಟಿರಲಿಲ್ಲ. ಆ ಸಂದರ್ಭದಲ್ಲಿ ನಾನು ಹಾಗೂ 2 ನೇ ಪ್ರತಿವಾದಿ ವಕೀಲರಿಗೆ ಮಾಹಿತಿ ಕೊಟ್ಟಿದ್ದೆವು. ಆ ಕಾರಣದಿಂದ ನಾವು ಹಾಕಿದ ಲಿಖಿತ ತಕರಾರು ಮತ್ತು ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ.

2. ಕರಾರು ಪತ್ರ ಆಗುವ ಸಂದರ್ಭದಲ್ಲಿ ಕೇವಲ 12 ಲಕ್ಷ ರೂಪಾಯಿಗಳು ಮಾತ್ರ ಸಾಲ ಬ್ಯಾಂಕಿನಲ್ಲಿ ಬಾಕಿ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅದೇ ರೀತಿ ಒಂದು ಅಡಮಾನ ಪತ್ರ ಬಾಕಿ ಇರುವ ಸಂದರ್ಭದಲ್ಲಿ ಇನ್ನೊಂದು ಕ್ರಯದ ಕರಾರು ಪತ್ರ ಮಾಡಿಕೊಳ್ಳಬಾರದು ಎಂಬ ಮಾಹಿತಿ ನಮಗೆ ಇದೆ ಎಂದರೆ ಸಾಕ್ಷಿ ಕ್ರಯದ ಕರಾರು ಪತ್ರ ಮಾಡಿಕೊಡುವವರಿಗೆ ನಾವು ಅಡಮಾನ ಪತ್ರದ ಬಗ್ಗೆ ತಿಳಿಸಿ ಆ ಬಳಿಕ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಮಾಹಿತಿಯನ್ನು ನಾನು ವಾದಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪತ್ರದಲ್ಲಿ ಅವರೇ ಉಲ್ಲೇಖಿಸಿದ್ದಾರೆ ಎಂದು ನುಡಿಯುತ್ತಾರೆ. 12 ಲಕ್ಷ ರೂಪಾಯಿ ಸಾಲ ಬಾಕಿ ಇದೆ ಎಂದು ಕ್ರಯದ ಕರಾರು ಪತ್ರದಲ್ಲಿ ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿ ಆ ರೀತಿ ಕ್ರಯದ ಕರಾರು ಪತ್ರದಲ್ಲಿ ಉಲ್ಲೇಖಿಸಲು ಬರುವುದಿಲ್ಲ ಎಂದು ನುಡಿಯುತ್ತಾರೆ.

3. ನನ್ನ ತಕರಾರಿನಲ್ಲಿ ನಾನು ನೋಂದಣಿಯಾಗದ ಕರಾರು ಪತ್ರ 2 ಪ್ರತಿ ಇದೆ ಒಂದು ವಾದಿಯ ಬಳಿ ಮತ್ತು ಇನ್ನೊಂದು ನನ್ನ ಬಳಿ ಇದೆ ಎಂದು ನುಡಿದಿದ್ದೇನೆ ಎಂದರೆ ಸರಿ. ಆ ರೀತಿಯಾಗಿ ಇರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿಯಾಗಿ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸದಿದ್ದರೂ ನಾನು ನ್ಯಾಯಾಲಯದಲ್ಲಿ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ದಾಖಲೆಯ ಮೂಲ ಪತ್ರ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ.

4. ಕರಾರು ಪತ್ರ ಆಗುವ ದಿನಾಂಕದಂದು ವಾದಿ ಪ್ರತಿವಾದಿಯವರಿಗೆ 40 ಲಕ್ಷ ರೂಪಾಯಿ ಚೆಕ್ಕು ನೀಡಿದ್ದರು. ಕರಾರು ಪತ್ರದಲ್ಲಿ ವಾದಿ ಪ್ರತಿವಾದಿಗೆ 5 ಲಕ್ಷ ರೂಪಾಯಿ ನಗದು ಹಣ ನೀಡಿದ್ದಾರೆ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿ ಉಲ್ಲೇಖ ಇದೆ ಆದರೆ ನಗದು ಹಣ ನೀಡಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ಉಲ್ಲೇಖವಾದಂತೆ 5 ಲಕ್ಷ ರೂಪಾಯಿಗಳ ನಗದು ಹಣವನ್ನು ವಾದಿ ಪ್ರತಿವಾದಿಗೆ ನೀಡಿಲ್ಲ ಎಂದು ನನ್ನ ಲಿಖಿತ ತಕರಾರಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿಲ್ಲ ಎಂದರೆ ಸಾಕ್ಷಿ ನಗದು ಹಣವನ್ನೇ ನೀಡಿಲ್ಲ ಎಂದು ಹೇಳಿದ್ದೇನೆ ಎಂದು ನುಡಿಯುತ್ತಾರೆ.

5. ರೂ.12,70,000/-ಗಳನ್ನು ಯಾವ ದಿನಾಂಕದಂದು ನಾವು ವಾದಿಗೆ ವಾಪಾಸು ನೀಡಿದ್ದೇವೆ ಎಂದರೆ ಸಾಕ್ಷಿ ನಮ್ಮ ಕಟ್ಟಡಗಳಲ್ಲಿರುವ ಬಾಡಿಗೆದಾರರು ಅವರಿಗೆ ತಿಂಗಳು ತಿಂಗಳು ಹಣ ಅವರ ಖಾತೆಗೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ಈ ರೀತಿಯಾಗಿ ನಮ್ಮ ಕಟ್ಟಡದಲ್ಲಿರುವ ಬಾಡಿಗೆದಾರರು ವಾದಿಗೆ ತಿಂಗಳು ತಿಂಗಳು ಹಣ ಖಾತೆಗೆ ಹಾಕುತ್ತಿದ್ದರು ಎಂಬುದನ್ನು ನಾನು ಲಿಖಿತವಾಗಿ ವಾದಿಗೆ ಅಥವಾ ಅವರ ಅಧಿಕಾರ ಪತ್ರ ಹೊಂದಿರುವವರಿಗೆ ತಿಳಿಸಿಲ್ಲ. ಸಾಕ್ಷಿ ಮುಂದುವರಿದು ಮೌಖಿಕವಾಗಿ ಹೇಳಿದ್ದೇವೆ ಎಂದು ನುಡಿಯುತ್ತಾರೆ.

ಅದೇ ರೀತಿ ನನ್ನ ಬಾಡಿಗೆದಾರರಿಗೆ ಲಿಖಿತವಾಗಿ ವಾದಿಯ ಖಾತೆಗೆ ಹಣ ಪಾವತಿ ಮಾಡಿ ಎಂದು ನಾನು ಹೇಳಿಲ್ಲ ಆದರೆ ಮೌಖಿಕವಾಗಿ ಹೇಳಿದ್ದೇನೆ.

6. ರಾಧಾ ರೆಡ್ಡಿ, ಸಜೀವನ್.ಕೆ., ದೀಪಕ್ ಕುಮಾರ್ ನನ್ನ ಬಾಡಿಗೆದಾರರು ಎಂದರೆ ಸರಿ. ಅವರ ಮತ್ತು ಸುರೇಶ್ ಕುಮಾರ್ ಪಾಂಡೇ ಅವರ ಪವರ್ ಆಫ್ ಅಟಾರ್ನಿಯವರ ಜೊತೆ ಬಾಡಿಗೆ ಕರಾರು ಪತ್ರ ಆಗಿದೆ ಎಂದರೆ ಸರಿಯಲ್ಲ.

7. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾವು ಒಟ್ಟಾರೆ ರೂ.40,00,000/-ವನ್ನು ವಾದಿಯ ಕಡೆಯಿಂದ ತೆಗೆದುಕೊಂಡಿದ್ದೇವೆ. ನನ್ನ ಲಿಖಿತ ತಕರಾರಿನ ಪ್ಯಾರಾ ನಂ.9 ರಲ್ಲಿ ನಾನು ವಾದಿಯ ಕಡೆಯಿಂದ ರೂ.1,07,80,000/-ಗಳನ್ನು ಚೆಕ್ ಮುಖಾಂತರ ಪಡೆದುಕೊಂಡಿದ್ದೇನೆ ಎಂದು ಬರೆದಿದ್ದೇನೆ ಎಂದರೆ ಸರಿ. ವಾದಿಯ ಪವರ್ ಆಫ್ ಅಟಾರ್ನಿ ಹೋಲ್ಡರ್ ನ ಮುಖಾಂತರ ಮೊದಲು 5 ಲಕ್ಷ ರೂಪಾಯಿಗಳ ನಗದು ಆ ಬಳಿಕ 35 ಲಕ್ಷ ರೂಪಾಯಿಗಳ ನಗದನ್ನು ಒಟ್ಟು 40 ಲಕ್ಷ ರೂಪಾಯಿಗಳನ್ನು ನಗದಾಗಿ ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು. ಆ ರೀತಿಯಾಗಿ ಹಣ ಪಡೆದುಕೊಂಡ ನಂತರ ನನಗೆ ಕ್ರಯ ಪತ್ರ ನೋಂದಣಿ ಮಾಡಿ ಕೊಡಲು ಸಾಧ್ಯವಾಗದೇ ಇದ್ದ ಕಾರಣ ನನ್ನ ಬಾಡಿಗೆದಾರರೊಂದಿಗೆ ವಾದಿ ಬಾಡಿಗೆ ಕರಾರು ಪತ್ರ ಮಾಡಿಕೊಂಡು ಆ ಪ್ರಕಾರ ಬಾಡಿಗೆದಾರರು ಅವರಿಗೆ ಬಾಡಿಗೆ ಪಾವತಿ ಮಾಡುವಂತೆ ನಾನೇ ಮಾತುಕತೆ ಮಾಡಿದ್ದೆ ಎಂದರೆ ಸುಳ್ಳು. ಆ ಪ್ರಕಾರ

ಬಾಡಿಗೆದಾರರು ವಾದಿಯ ಖಾತೆಗೆ ಬಾಡಿಗೆ ಪಾವತಿ ಮಾಡುತ್ತಿದ್ದರು ಎಂದರೆ ಸುಳ್ಳು. ನಾನು ಯಾವುದೇ ಹಣವನ್ನು ವಾದಿಗೆ ಕೊಟ್ಟಿಲ್ಲ ಮತ್ತು ನನ್ನ ಬಾಡಿಗೆದಾರರೇ ವಾದಿಯ ಖಾತೆಗೆ ರೂ.12,70,000/-ಗಳನ್ನು ಹಾಕಿರುತ್ತಾರೆ ಎಂದರೆ ಸುಳ್ಳು. ವಾದಿ ತನಗೆ ಹಣವನ್ನು ವಾಪಾಸು ಕೊಡಿ ಎಂದು ಲಿಖಿತ ನೋಟೀಸು ನೀಡಿರಲಿಲ್ಲ. ಅದೇ ರೀತಿ ನಮಗೂ ಸಹ ವಾದಿಯ ಹಣವನ್ನು ವಾಪಾಸು ಮಾಡಲು ಆಗುತ್ತಿಲ್ಲ ಮತ್ತು ಆ ಪ್ರಕಾರ ಸ್ವಲ್ಪ ಸ್ವಲ್ಪ ಹಣವನ್ನು ಕಂತಿನಲ್ಲಿ ವಾಪಾಸು ಕೊಡುತ್ತೇವೆ ಎಂದೂ ಸಹ ವಾದಿಗೆ ತಿಳಿಸಿರಲಿಲ್ಲ.

7. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಏನು ಎಂದು ಕೇಳಿದಾಗ ಸಾಕ್ಷಿ ನನ್ನ ತಾಯಿ ಹಾಗೂ ನನ್ನ ಅಣ್ಣ ಸದರಿ ದಾಖಲೆಯನ್ನು ವಾದಿಗೆ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಪ್ರಕಾರ 35 ಲಕ್ಷ ರೂಪಾಯಿಗಳ ನಗದು ಹಣವನ್ನು ಪಾವತಿಸಲಾಗಿದೆ ಎಂದು ಬರೆದಿದೆ ಎಂದರೆ ಸುಳ್ಳು. ಸದರಿ ದಾಖಲೆಯನ್ನು ನಿ.ಸಿ.1 ಎಂದು ವಾದಿ ಪರ ವಕೀಲರ ತಕರಾರಿನೊಂದಿಗೆ ಗುರುತಿಸಲಾಯಿತು. ಸದರಿ ದಾಖಲೆಯಲ್ಲಿದ್ದ 1 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ಒಪ್ಪಿದ ಕಾರಣ ಅದನ್ನು ನಿ.ಸಿ.1(ಎ) ಎಂದು ಮತ್ತು 2 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ಒಪ್ಪಿದ ಕಾರಣ ಅದನ್ನು ನಿ.ಸಿ.1(ಬಿ) ಎಂದು ಗುರುತಿಸಲಾಯಿತು.

8. ನಿ.ಸಿ.1 ರ ದಾಖಲೆಯನ್ನು ವಾದಿಯವರ ಪವರ್ ಆಫ್ ಅಟಾರ್ನಿ ಹೋಲ್ಡರ್ ಅವರಿಗೆ ಮೂರೂ ಆಸ್ತಿಯನ್ನು ಕ್ರಯದ ಕರಾರು ಪತ್ರ ಮಾಡಿಕೊಟ್ಟಾಗ ಅವರಿಂದ ರೂ.1,07,80,000/-ಗಳನ್ನು ನಾವು ತೆಗೆದುಕೊಂಡ ಸಂದರ್ಭದಲ್ಲಿ ಸದರಿ ದಾಖಲೆಗೆ ಸಹಿ ಹಾಕಿ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಾವು ಮಾಡಿಕೊಟ್ಟ 3 ಕರಾರು ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ 1 ಕರಾರು ಪತ್ರವನ್ನು ನಾವು ಹಾಜರುಪಡಿಸಿದ್ದೇವೆ ಉಳಿದ ದಾಖಲೆಗಳು ವಾದಿಯ ಬಳಿಯೇ ಇವೆ ಎಂದು ನುಡಿಯುತ್ತಾರೆ. 3 ಕರಾರು ಪತ್ರಗಳಲ್ಲಿ ಒಂದು ದಾವಾ ಸ್ವತ್ತಿಗೆ ಸಂಬಂಧಿಸಿದ್ದು, ಇನ್ನೊಂದು ಬಿಲ್ಡಿಂಗ್ ನಂ.170 ಮತ್ತು ಇನ್ನೊಂದು ಬಿಲ್ಡಿಂಗ್ ನಂ.106 ಕ್ಕೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಬಿಲ್ಡಿಂಗ್ ನಂ.170 ಮತ್ತು ಬಿಲ್ಡಿಂಗ್ ನಂ.106 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ಅವುಗಳನ್ನು ಈಗಾಗಲೇ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಬಿಲ್ಡಿಂಗ್ ನಂ.170 ಮತ್ತು ಬಿಲ್ಡಿಂಗ್ ನಂ.106 ಕ್ಕೆ ಸಂಬಂಧಿಸಿದಂತಹ ಕರಾರು ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅವುಗಳು ವಾದಿಯ ಹತ್ತಿರವೇ ಇದೆ ಎಂದು ನುಡಿಯುತ್ತಾರೆ. ಪ್ರಾ.ಸಾ.1 ರವರ ಪಾಟಿ ಸವಾಲಿನಲ್ಲಿ ನಾನು ಕ್ರಯದ ಕರಾರು ಪತ್ರಗಳನ್ನು 2 ಪ್ರತಿ ಮಾಡಿಸಿದ್ದು ಒಂದು ಪ್ರತಿ ನಮ್ಮ ಬಳಿಯೂ ಇನ್ನೊಂದು ಪ್ರತಿ ವಾದಿಗಳ ಬಳಿಯೂ ಇವೆ ಎಂದು ಹೇಳಿದ್ದೀರೀ ಎಂದರೆ ಸಾಕ್ಷಿ ದಾವಾ

ಸ್ವತ್ತಿಗೆ ಸಂಬಂಧಿಸಿದ ಕರಾರು ಪತ್ರ ಮಾತ್ರ 2 ಪ್ರತಿ ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರಗಳ ಇನ್ನೊಂದು ಮೂಲ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ಬಳಿ ಇರುವ ಮೂಲ ಪತ್ರವನ್ನೇ ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ.

9. ಬಿಲ್ಡಿಂಗ್ ನಂ.170 ಮತ್ತು ಬಿಲ್ಡಿಂಗ್ ನಂ.106 ಕ್ಕೆ ಸಂಬಂಧಿಸಿದ ಕರಾರು ಪತ್ರಗಳನ್ನು ರಿಜಿಸ್ಟರ್ ಮಾಡಿಸಿಲ್ಲ. ಆ ರೀತಿಯಾಗಿ ಯಾವುದೇ ದಾಖಲೆಗಳನ್ನು ಮಾಡಿಕೊಳ್ಳದ ಕಾರಣ ನಾನು ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ವಾದಿ ಸದರಿ ದಾಖಲೆಗಳನ್ನು ಮಾಡಿಕೊಟ್ಟಿದ್ದೇನೆ ಎಂದು ನಾನು ಹೇಳುವ ಕಾಲದಲ್ಲಿ ಅಮೇರಿಕಾದಲ್ಲಿ ಇದ್ದ ಕಾರಣ ಆ ರೀತಿಯಾಗಿ ದಾಖಲೆಗಳನ್ನು ಮಾಡಿಕೊಡುವ ಪ್ರಮೇಯವೇ ಇಲ್ಲ ಎಂದರೆ ಸಾಕ್ಷಿ ನಮಗೆ ವಾದಿಯವರ ಪವರ್ ಆಫ್ ಅಟಾರ್ನಿ ಹೋಲ್ಡರ್ ಅವರ ಮುಖಾಂತರವೇ ಎಲ್ಲಾ ವ್ಯವಹಾರಗಳು ಆಗಿವೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ 3 ಕರಾರು ಪತ್ರಗಳು ವಾದಿಯ ಜೊತೆ ಆಗಿತ್ತು ಎಂಬುದನ್ನು ನಾನು ನನ್ನ ಲಿಖಿತ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿ. ಮೊದಲ ಕ್ರಯದ ಕರಾರು ಪತ್ರ ಆಗುವ ಸಂದರ್ಭದಲ್ಲಿ 5 ಲಕ್ಷ ರೂಪಾಯಿಗಳನ್ನು ನಗದಾಗಿಯೂ ಆ ಬಳಿಕ 40 ಲಕ್ಷ ರೂಪಾಯಿಗಳನ್ನು ಚೆಕ್ ಮುಖಾಂತರವೂ ನಂತರ ರೂ.17,80,000/-ಗಳನ್ನು ಚೆಕ್ ಮೂಲಕ ಆ ಬಳಿಕ ರೂ.50,00,000/-ಗಳನ್ನು

ಚೆಕ್ ಮೂಲಕ ತದನಂತರ 35 ಲಕ್ಷ ರೂಪಾಯಿಗಳನ್ನು ನಗದಾಗಿಯೂ ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿ ದಾವಾ ಸ್ವತ್ತಿಗೆ 40 ಲಕ್ಷ ರೂಪಾಯಿಗಳ ಚೆಕ್ಕನ್ನು ನೀಡಿದ್ದರು, ಇನ್ನೊಂದು ಕರಾರು ಪತ್ರದ ಪ್ರಕಾರ ಬಿಲ್ಡಿಂಗ್ ನಂ.170 ಕ್ಕೆ 50 ಲಕ್ಷ ರೂಪಾಯಿಯ ಚೆಕ್ ನೀಡಿದ್ದರು, ಬಿಲ್ಡಿಂಗ್ ನಂ.106 ರ ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ರೂ.17,80,000/-ಗಳ ಚೆಕ್ ನೀಡಿದ್ದಾರೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದಂತೆ ಬೇರೆ ಬೇರೆ ಚೆಕ್ಕುಗಳನ್ನು ಬೇರೆ ಬೇರೆ ಕರಾರು ಪತ್ರಗಳಡಿಯಲ್ಲಿ ನಮಗೆ ನೀಡಿದ್ದಾರೆ ಎಂದು ನನ್ನ ಲಿಖಿತ ತಕರಾರಿನಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾವು ನಮ್ಮ ವಕೀಲರಿಗೆ ಇದನ್ನು ತಿಳಿಸಿದ್ದು ಅವರು ಈ ರೀತಿಯಾಗಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ರೂ.1,47,80,000/-ಗಳನ್ನು ಪಡೆದುಕೊಂಡ ನಂತರ ಬ್ಯಾಂಕಿನಲ್ಲಿ 2 ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿ ರೂ.3,30,00,000/-ಗಳನ್ನು ಸ್ಥಳದ ಮಾರುಕಟ್ಟೆ ಮೌಲ್ಯ ನಾವು ವಾದಿಯಿಂದ ಕೇಳಿದ್ದೆವು ಎಂದರೆ ಸುಳ್ಳು. ಆ ಪ್ರಕಾರ ನಿ.ಪಿ.1 ರ ದಾಖಲೆಯನ್ನು ನನ್ನ ತಾಯಿ ಹಾಗೂ ನನ್ನ ಅಣ್ಣ ಮಾಡಿಕೊಂಡು ವಾದಿಗೆ ತಲುಪಿಸಿದ್ದೇವೆ ಎಂದರೆ ಸುಳ್ಳು.

10. ಕರಾರು ಪತ್ರ ಮಾಡಿಕೊಂಡ ನಂತರ ಐಡಿಬಿಐ ಬ್ಯಾಂಕಿನಲ್ಲಿ ಸಾಲಕ್ಕೆ ವ್ಯವಸ್ಥೆ ಮಾಡಿಕೊಂಡು ವಾದಿ ಕ್ರಯ ಪತ್ರ ಮಾಡಿಕೊಡಿ ಎಂದು ನಮ್ಮ ಬಳಿ ಕೇಳಿದ್ದರು ಎಂದರೆ ಸುಳ್ಳು. ಆ ರೀತಿಯಾಗಿ ವಾದಿ ನಮಗೆ ಲಿಖಿತವಾಗಿ ನೋಟೀಸು ಸಹ ನೀಡಿದ್ದರು ಎಂದರೆ ಸುಳ್ಳು.

11. ಬ್ಯಾಂಕಿನಲ್ಲಿ 2 ಕೋಟಿಗಿಂತಲೂ ಜಾಸ್ತಿ ಸಾಲ ಇದ್ದರೂ ಸಹ 12 ಲಕ್ಷ ರೂಪಾಯಿ ಮಾತ್ರ ಸಾಲ ಇದೆ ಎಂದು ಹೇಳಿ ಸತ್ಯವನ್ನು ಮರೆಮಾಚಿ ಕರಾರು ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ದಾವಾ ಸ್ವತ್ತಿಗೆ 12 ಲಕ್ಷ ರೂಪಾಯಿ ಬಾಕಿ ಇದ್ದು ಬೇರೆ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲ ಇದೆ ಎಂದು ನುಡಿಯುತ್ತಾರೆ. ಕರಾರು ಪತ್ರ ಮಾಡಿಕೊಂಡ ನಂತರ ಬ್ಯಾಂಕಿನಲ್ಲಿದ್ದ ಸಾಲವನ್ನು ಮರುಪಾವತಿ ಮಾಡಲು ಮತ್ತು ದಾವಾ ಆಸ್ತಿಗಳ ಮೇಲಿದ್ದ ಋಣವನ್ನು ತೆಗೆಯಲು ನಾವು ವ್ಯವಸ್ಥೆ ಮಾಡಿಕೊಂಡಿದ್ದೆವು. ಆ ರೀತಿಯಾಗಿ ಮರುಪಾವತಿ ಮಾಡಲು ನಾವು ವ್ಯವಸ್ಥೆ ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಬಾಕಿ ಇತ್ತು ಎಂದು ಹೇಳಲಾದ 12 ಲಕ್ಷ ರೂಪಾಯಿಗಳನ್ನು ನಾವು ಬ್ಯಾಂಕಿಗೆ ಮರುಪಾವತಿ ಮಾಡಿದ್ದೇವಾ ಎಂದರೆ ಸಾಕ್ಷಿ ಬ್ಯಾಂಕಿನವರು ತೆಗೆದುಕೊಳ್ಳಲು ಸಿದ್ಧರಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯವರು ಸಂಪೂರ್ಣ ಹಣವನ್ನು ಪಾವತಿ ಮಾಡಿ ಕ್ರಯ ಪತ್ರ ಮಾಡಿಕೊಳ್ಳಲು ತಯಾರಿದ್ದೇವೆ ಎಂದು ನ್ಯಾಯಾಲಯದ ಎದುರು ಮೆಮೊ ಹಾಕಿದ್ದಾರೆ ಎಂದರೆ ಸುಳ್ಳು. ವಾದಿಯವರು ಆ ರೀತಿಯಾಗಿ ಸಂಪೂರ್ಣ ಹಣವನ್ನು ಪಾವತಿ ಮಾಡಿ ಕ್ರಯ ಪತ್ರ ಮಾಡಿಕೊಳ್ಳಲು ಸಿದ್ಧರಿದ್ದೇವೆ ಎಂದು ಹೇಳಿದ್ದರೂ ಸಹ ನಾನಾಗಲೀ ನನ್ನ ಅಣ್ಣನಾಗಲೀ ಅಥವಾ ನನ್ನ ತಾಯಿಯಾಗಲೀ ನ್ಯಾಯಾಲಯದ ಮುಂದೆ ಬಂದಿರಲಿಲ್ಲ ಎಂದರೆ ಸುಳ್ಳು.

12. 3 ನೇ ಪ್ರತಿವಾದಿ ಅವರ ಲಿಖಿತ ತಕರಾರಿನಲ 22 ನೇ ಪ್ಯಾರಾದಲ್ಲಿ ದಿನಾಂಕ 22.06.2011 ರ ಸಮಯದಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 25 ಲಕ್ಷ ಹಾಗೂ ಬಡ್ಡಿ ಸಾಲ ಬಾಕಿ ಇತ್ತು ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ 25 ಲಕ್ಷ ಸಾಲ ತೆಗೆದುಕೊಂಡಿದ್ದೇವೆ ಎಂದು ಅದರಲ್ಲಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನಮ್ಮ ಬೇರೆ ಬೇರೆ ಆಸ್ತಿಗಳನ್ನು ಸೇರಿಸಿ ನಾವು 3 ಕೋಟಿಗಿಂತಲೂ ಹೆಚ್ಚಿನ ಸಾಲವನ್ನು ಪಡೆದುಕೊಂಡ ಕಾರಣ ದಾವಾ ಆಸ್ತಿಯನ್ನು ಬಿಡುಗಡೆ ಮಾಡಲು ಆಗುವುದಿಲ್ಲ ಎಂದು ಲಿಖಿತ ತಕರಾರು ಹಾಕಿದ್ದಾರೆ ಎಂದರೆ ಸುಳ್ಳು.

13. ನಾವು ವಾದಿಯವರಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಚೆಕ್ ಮುಖಾಂತರ ರೂ.1,07,80,000/-ಗಳನ್ನು ಹಾಗೂ 40 ಲಕ್ಷ ನಗದಾಗಿ ಪಡೆದುಕೊಂಡು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದರೂ ಸಹ ಕ್ರಯ ಪತ್ರ ಮಾಡಿಕೊಡಲು ತಪ್ಪಿದ್ದೀರೀ ಎಂದರೆ ಸುಳ್ಳು. ಬಾಕಿ ಉಳಿದ ಕ್ರಯದ ಪ್ರತಿಫಲವನ್ನು ವಾದಿ ನೀಡುತ್ತೇವೆ ಮತ್ತು ಕ್ರಯ ಪತ್ರ ನೋಂದಣಿ ಮಾಡಿಕೊಡಿ ಎಂದು ನಮಗೆ ನೋಟೀಸು ನೀಡಿ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಹಾಜರಾಗದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಇಂದಿಗೂ ಸಹ ಉಳಿಕೆ ಕ್ರಯದ ಪ್ರತಿಫಲವನ್ನು ನೀಡಲು ತಯಾರಿದ್ದಾರೆ ಮತ್ತು ಆ ಪ್ರಕಾರ ನಾವು ಕ್ರಯ ಪತ್ರ ಮಾಡಿಕೊಡಲು ಬಾಧ್ಯರಿದ್ದೇವೆ ಎಂದರೆ ಸಾಕ್ಷಿ ಸುಳ್ಳು ಮತ್ತು ಕರಾರು ಪತ್ರ ರದ್ದತಿಯಾಗಿ ಪುನಃ ಮುಂಗಡ ಹಣ

ಪಾವತಿ ಮಾಡಲು ನಾವು ಸ್ವಲ್ಪ ಸ್ವಲ್ಪವಾಗಿ ಹಣ ಪಾವತಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಿದ್ದಾರೆ. ವಾದಿಯವರ ಹಣವನ್ನು ಆಕ್ರಮವಾಗಿ ಪಡೆಯಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.